ಓ.ಎಸ್. ನಂ. 175/2017

ಪಿ.ಡಬ್ಲ್ಯು಼ 03 (ಕೆ ವೀರೇಶ)

ದಿನಾಂಕಃ 22.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ನಾನು ಮತ್ತು ನನ್ನ ಇಬ್ಬರು ವಿದ್ಯಾಭಾಸ ಮಾಡಿರುವುದಿಲ್ಲ. ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ವೀರಭದ್ರಪ್ಪನವರು ನೀಡಿರುತ್ತಾರೆ. ಪ್ರಮಾಣ ಪತ್ರದಲ್ಲಿ ಖರೀದಿ ಪತ್ರದ ಬಗ್ಗೆ ಹೇಳಿದ್ದು ಅದು ಯಾವ ಪತ್ರ ಎಂದು ನನಗೆ ಹೇಳಲಾಗುವುದಿಲ್ಲ. ಅದು ಯಾವ ವಿಚಾರವಾಗಿ ನಡೆದಿದೆ ಎಂದು ನನಗೆ ಗೊತ್ತಿಲ್ಲ. ಅದನ್ನು ನಾನು ಇಂದಿಗೂ ನೋಡಿರುವುದಿಲ್ಲ ಎಂದರೆ ಹೌದು. ಅದರಲ್ಲಿ ಸಹಿ ಮಾಡಿರುವವರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಸಹಿಯನ್ನು ನಾನು ಇಂದಿನವರೆಗೂ ನೋಡಿರುವುದಿಲ್ಲ ಎಂದರೆ ನೋಡಿರುತ್ತೇನೆ. ಆತ ಹೆಬ್ಬೆಟ್ಟು ಸಹಿ ಮಾಡುತ್ತಿದ್ದ ಎಂದರೆ ಇಲ್ಲ. ನನ್ನ ತಂದೆಯ ಸಹಿಗಳನ್ನು ಯಾವ ದಾಖಲಾತಿಗಳಲ್ಲಿ ನೋಡಿರುತ್ತೇನೆ ಎಂದು ನನಗೆ ಹೇಳಲಾಗುವುದಿಲ್ಲ. ದಾವೆಯನ್ನು ವೀರಭದ್ರಪ್ಪನವರ ವಿರುದ್ದ ಹೂಡಿದ್ದು ಅದನ್ನು ಯಾರು ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಣ್ಣವೀರಪ್ಪನವರ ಬಗ್ಗೆ ಹಾಗೂ ಅವರ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ವೀರಭದ್ರಪ್ಪ ಹಾಗೂ ನಾನು ಸ್ನೇಹಿತರು ಎಂದರೆ ಹೌದು. ಆದ ಕಾರಣ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಾಗಿ ಹೇಳುತ್ತಿದ್ದೇನೆ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.